**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಂ.ಎಫ್. ಸಿ, ಕನಕಪುರ**
**C.C. 485.2022**

**D W1**

| | | |
|---|---|---|
| ಹೆಸರು | : | ಶಿವಶಂಕರಪ್ಪ |
| ತಂದೆಯ ಹೆಸರು | : | ಶಿವಲಿಂಗೇಗೌಡ |
| ವಯಸ್ಸು | : | 55 |
| ಉದ್ಯೋಗ | : | ಚಾಲಕ |
| ವಾಸ | : | ಮಾರುತಿ ನಗರ , ಬೆಂಗಳೂರು |

**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ ಃ ದಿನಾಂಕ 02.04.2026.**

ಪಿರ್ಯಾದಿ ಮತ್ತು ನಾನು ಒಟ್ಟಿಗೆ ಬನಶಂಕರಿಯಲ್ಲಿರುವ ಲೆದರ್ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆವು. ನಾನು ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದೆ . ಪಿರ್ಯಾದಿ ಸದರಿ ಗಾರ್ಮೆಂಟ್ಸ್ ನಲ್ಲಿ ಟೈಲರ್ ಆಗಿ ಕೆಲಸ ಮಾಡುತ್ತಿದ್ದರು. ನಾನು ಸದರಿ ಗಾರ್ಮೆಂಟ್ಸ್ ನಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದೆ . ಕರೋನಾ ಸಮಯದಲ್ಲಿ ಸದರಿ ಗಾರ್ಮೆಂಟ್ಸ್ ಮುಚ್ಚಲ್ಪಟ್ಟಿರುತ್ತದೆ. ಅದಕ್ಕೂ ಪೂರ್ವದಲ್ಲಿ ಪಿರ್ಯಾದಿ ನನ್ನ ಬಳಿ ತಿಂಗಳಿಗೆ 8 ಸಾವಿರದಂತೆ 1 ವರ್ಷ 7 ತಿಂಗಳು ಕಟ್ಟಿರುತ್ತಾರೆ. ಈ ಹಂತದಲ್ಲಿ ಕರೋನಾ ಬಂದ ಕಾರಣ ಗಾರ್ಮೆಂಟ್ಸ್ ಮುಚ್ಚಿ ರುತ್ತದೆ. ಈ ಸಮಯದಲ್ಲಿ ಪಿರ್ಯಾದಿ ನನ್ನ ಬಳಿ ಭದ್ರತೆಗಾಗಿ ಸಹಿ ಮಾಡಿದ ಒಂದು ಚೆಕ್ ಅನ್ನು ಪಡೆದಿರುತ್ತಾರೆ.

ಇಬ್ಬರೂ ಕೆಲಸ ಬಿಟ್ಟಿರುತ್ತೇವೆ. ನಾನು ಹಾಸನಕ್ಕೆ ಹೋಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. 3 ತಿಂಗಳ ಬಳಿಕ ನನ್ನ ಮೇಲೆ ಪಿರ್ಯಾದಿ ಪ್ರಕರಣ ದಾಖಲಿಸಿರುವುದು ಗೊತ್ತಾಗಿರುತ್ತದೆ. ನನಗೆ ವಕೀಲರ ಮೂಲಕ ಯಾವುದೇ ನೋಟಿಸ್

ಬಂದಿರುವುದಿಲ್ಲ. ನನಗೆ ನ್ಯಾಯಾಲಯದಿಂದ ನೋಟಿಸ್ ಬಂದ ಮೇಲೆ ನಾನು ವಕೀಲರನ್ನು ಭೇಟಿ ಆಗಿ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು ಪಿರ್ಯಾದಿಗೆ ಈ ಪ್ರಕರಣದ ಚೆಕ್ ನಲ್ಲಿ ಹೇಳಿರುವ ಹಾಗೆ 7 ವರೆ ಲಕ್ಷ ಕೊಡಲು ಬಾದ್ಯಸ್ಥನಾಗಿರುವುದಿಲ್ಲ , ನಾನು ಪಿರ್ಯಾದಿ ಯಿಂದ 7 ವರೆ ಲಕ್ಷ ಹಣವನ್ನು ಪಡೆದಿರುವುದಿಲ್ಲ. ಚೀಟಿ ವ್ಯವಹಾರದ ಸಂಬಂಧ ತಿಂಗಳಿಗೆ 8 ಸಾವಿರ ದಂತೆ 1 ವರ್ಷ 7 ತಿಂಗಳು ಪಿರ್ಯಾದಿ ಯಿಂದ ಹಣ ಪಡೆದಿರುತ್ತೇನೆ. ಸದರಿ ಹಣವನ್ನು ಕೊಡಲು ಬಾದ್ಯಸ್ಥನಾಗಿರುತ್ತೇನೆ.

ಸಾಕ್ಷಿದಾರರು ಆಧಾರ್ ಕಾರ್ಡ್ ನ ದೃಢೀಕೃತಪ್ರತಿ ಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

**ಪಿರ್ಯಾದಿ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ